3	ನದಿ ಕಣಿವೆ ಯೋಜನೆ	---	13	13
4	ನಬಾರ್ಡ್ - WDF	---	2	2
	ಒಟ್ಟು	**58**	**281**	**339**

ಇ) ಹೌದು

ಈ) ಬಾಗಲಕೋಟೆ ತಾಲ್ಲೂಕಿನಲ್ಲಿ ಮಾತ್ರ 4 ಕಿರು ಜಲಾನಯನಗಳನ್ನು ಗ್ರಾಮೀಣ ಅಭಿವೃದ್ಧಿ ಅನುಷ್ಠಾನ ಸಂಸ್ಥೆ, ಬಾಗಲಕೋಟೆ ಇವರಿಗೆ ವಹಿಸಲಾಗಿದೆ.

ಉ) ಹೌದು

ಊ) ವಿವರಗಳನ್ನು ಕೆಳಗೆ ನೀಡಲಾಗಿದೆ. ಇವುಗಳಿಗೆ ಪುನಃ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಬೇರೆ ಯಾವುದೇ ಯೋಜನೆಗಳನ್ನು ವಹಿಸಿರುವುದಿಲ್ಲ.

1. ಯುವಕ ವಿಕಾಸ ಕೇಂದ್ರ, ಬಿಜಾಪುರ.
2. ಸಬಲಾ ಸಂಸ್ಥೆ, ಬಿಜಾಪುರ
3. ಇಂಡಿಯನ್ ಸೊಸೈಟಿ ಫಾರ್ ಎನ್‌ವಿರಾನ್ ಮೆಂಟಲ್, ಎಜುಕೇಷನಲ್ ಅಂಡ್ ರಿಸರ್ಚ್ (ಐ ಸೀರ್)

1183 (1416) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ಸಹಕಾರ ಬ್ಯಾಂಕ್ ಮೂಲಕ ನೇಕಾರರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆ ಜಾರಿಯಾಗದಿರಲು ಕಾರಣವೇನು? ಇದಕ್ಕಿರುವ ತಾಂತ್ರಿಕ ತೊಂದರೆಗಳೇನು?

ಆ) ಸರ್ಕಾರದ ಪಾಲಿನ ಬಡ್ಡಿ ಭರ್ತಿ ವಿಳಂಬದ ಕಾರಣ ನೀಡಿ ಪಟ್ಟಣ ಸಹಕಾರ ಬ್ಯಾಂಕುಗಳು ನೇಕಾರರಿಗೆ ಸಾಲ ನೀಡುವುದು ನಿಜವೇ?

ಇ) ಹಾಗಿದ್ದಲ್ಲಿ, ನೇಕಾರರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ನೀಡಲು ಜರೂರಾಗಿ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) ಮತ್ತು ಆ) ದಿನಾಂಕ: 01–04–2006 ರಿಂದ ಪಟ್ಟಣ ಸಹಕಾರಿ ಬ್ಯಾಂಕುಗಳು ನೇಕಾರರಿಗೆ ಶೇ. 4ರ ಬಡ್ಡಿ ದರದಲ್ಲಿ ಸಾಲ ಒದಗಿಸಬೇಕೆಂದು ತತ್ಸಂಬಂಧದಲ್ಲಿ ನೇಕಾರರಿಗೆ ಒದಗಿಸಲಾದ ಸಾಲಗಳ ಮೇಲೆ ಶೇ. 7.5ರಷ್ಟು ಬಡ್ಡಿ ಸಹಾಯಧನವನ್ನು ಸರ್ಕಾರವು ಭರಿಸಿಕೊಡುವುದಾಗಿ ಆದೇಶ ಹೊರಡಿಸಲಾಗಿದೆ. ಆದರೆ ಪಟ್ಟಣ ಸಹಕಾರ ಬ್ಯಾಂಕುಗಳು ಕೆಳಕಂಡ ಕಾರಣಗಳಿಗಾಗಿ ನೇಕಾರರಿಗೆ ಶೇ.4ರ ಬಡ್ಡಿ ದರದಲ್ಲಿ ಸಾಲ ನೀಡಿರುವುದಿಲ್ಲ.

1) ಅವುಗಳ ನಿಧಿಗಳ ಬೆಲೆಯು (cost of funds) ಹೆಚ್ಚಿದ್ದು ಶೇ.9ರಿಂದ 9.5ರಷ್ಟು ಬಡ್ಡಿ ಸಹಾಯಧನವನ್ನು ಸರ್ಕರವು ಮಂಜೂರು ಮಾಡಬೇಕು.

2) ಬಡ್ಡಿ ಸಹಾಯಧನವನ್ನು ಪ್ರತಿ ತಿಂಗಳು ಅಥವಾ ಕನಿಷ್ಠಪಕ್ಷ 3 ತಿಂಗಳಿಗೊಮ್ಮೆಯಾದರೂ ಭರಿಸಿಕೊಡಬೇಕು. ಇಲ್ಲದಿದ್ದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾನದಂಡಗಳ ಪ್ರಕಾರ ಅಂತಹ ಸಾಲಗಳು ಎನ್‌ಪಿಎ ಆಗಿ ಪರಿಗಣಿಸಲ್ಪಡುತ್ತವೆ.

ಇ) 2007–08ನೇ ಸಾಲಿಗೆ ಸರ್ಕಾರವು ಭರಿಸಿಕೊಡುವ ಬಡ್ಡಿ ಸಹಾಯಧನದ ಪ್ರಮಾಣವನ್ನು ಶೇ. 8.5ರಷ್ಟು ಎಂದು ನಿಗದಿಗೊಳಿಸಲಾಗಿರುತ್ತದೆ.

1185 (1418) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ಸಹಕಾರ ಬ್ಯಾಂಕ್‌ಗಳ ಮೂಲಕ ನೇಕಾರರಿಗೆ ಕಲ್ಪಿಸಲಾದ ಬಡ್ಡಿ ಮನ್ನಾ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬ್ಯಾಂಕ್‌ಗಳಲ್ಲಿ ನೇಕಾರರ ಹೊರತಾಗಿ ಬಡ್ಡಿ ಮನ್ನಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ?